
# ಕರ್ನಾಟಕದ ಸಂದರ್ಭದಲ್ಲಿ ರಾಮಕೃಷ್ಣ ಭಾವಧಾರೆ : ಒಂದು ಪ್ರಸ್ತಾವನೆ

**ಸ್ವಾಮಿ ವೀರೇಶಾನಂದ**

ರಾಮಕೃಷ್ಣ ಭಾವಧಾರೆ ಎಂಬುದು ಭಾರತೀಯ ಆಧ್ಯಾತ್ಮಿಕ ಇತಿಹಾಸದಲ್ಲಿ ಇತ್ತೀಚೆಗೆ ಮೂಡಿಬಂದ ಒಂದು ಹೊಂಬೆಳಕು. ಇದರ ತಾತ್ತ್ವಿಕ ಹಿನ್ನೆಲೆ, ಅದು ವ್ಯಾಪಕಗೊಂಡ ಬಗೆ ಹಾಗೂ ಅದರ ಮಹತ್ವವನ್ನು ಇಲ್ಲಿ ವಿವರಿಸಲಾಗಿದೆ. ಲೇಖಕರು 'ವಿವೇಕಪ್ರಭ'ದ ಹಿಂದಿನ ಸಂಪಾದಕರು; ಬಳಿಕ ಆಂಗ್ಲ ಮಾಸಪತ್ರಿಕೆ 'ಪ್ರಬುದ್ಧ ಭಾರತ'ದ ಸಂಪಾದಕರಾಗಿಯೂ ಅವರು ಸೇವೆ ಸಲ್ಲಿಸಿದ್ದರು. ಪ್ರಸ್ತುತ ಬೆಂಗಳೂರು ರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಉತ್ತಮ ವಾಗ್ಮಿಗಳೂ ಲೇಖಕರೂ ಆಗಿರುವ ಅವರು ಹಲವು ಗ್ರಂಥಗಳನ್ನೂ ರಚಿಸಿದ್ದಾರೆ.



## ಶ್ರೀರಾಮಕೃಷ್ಣ ಭಾವ

ಶ್ರೀರಾಮಕೃಷ್ಣರು ಭಾವಸಾಗರ ಸ್ವರೂಪ. ಭಾವ ಎನ್ನುವುದು ಶ್ರೀರಾಮಕೃಷ್ಣರ ಜೀವನದಲ್ಲಿ ಹಾಸುಹೊಕ್ಕಾಗಿ ಇರುವ ಅವಸ್ಥೆ. ತಮ್ಮ ಉದ್ಗ್ರಂಥವಾದ 'ಶ್ರೀರಾಮಕೃಷ್ಣ ಲೀಲಾಪ್ರಸಂಗ' ದಲ್ಲಿ ಸ್ವಾಮಿ ಶಾರದಾನಂದಜಿ ಅವರು ಹೀಗೆ ಬರೆಯುತ್ತಾರೆ: ''ಶ್ರೀರಾಮಕೃಷ್ಣರನ್ನು ನೋಡಿದಾಗಲೆಲ್ಲ ಅವರು ಒಂದು ಭಾವ ಘನಮೂರ್ತಿ ಎಂದೆನಿಸುತ್ತಿತ್ತು. ಆಧ್ಯಾತ್ಮಿಕ ಭಾವಗಳೆಲ್ಲ ಏಕತ್ರ ಕಲೆತು ಒಂದು ಹೊಸ ರೂಪವನ್ನು ತಾಳಿರುವಂತೆ ಅವರು ಕಾಣುತ್ತಿದ್ದರು.'' *(ಶ್ರೀರಾಮಕೃಷ್ಣ ಲೀಲಾಪ್ರಸಂಗ, ಸಂ.೧, ಪು. ೩೭೧)* ಶ್ರೀರಾಮಕೃಷ್ಣರ ಮನಸ್ಸಿನಲ್ಲಿ ಭಾವಪರಿವರ್ತನೆ ಉಂಟಾದಂತೆ, ಅವರ ಶರೀರದಲ್ಲಿಯೂ ಅದ್ಭುತ ಮಾರ್ಪಾಡು ಉಂಟಾಗುತ್ತಿತ್ತು. ಸ್ವಾಮಿ ಶಾರದಾನಂದಜಿ ಅವರು ಹೇಳುವಂತೆ, ಭಾವರಾಜ್ಯದಲ್ಲಿ ಎಲ್ಲೆಲ್ಲಿಯೂ ಮುಕ್ತವಾಗಿ ಚಲಿಸುವ ಸಾಮರ್ಥ್ಯವಿತ್ತು ಅವರಿಗೆ. ಭಾವಮುಖ ಸ್ಥಿತಿಯಲ್ಲಿ ಅವರಿಗೆ ಸಮಸ್ತ ಜಗತ್ತು ಕೂಡ ಭಾವಮುಖವಾಗಿ ಕಾಣುತ್ತಿತ್ತು. ಜಗನ್ಮಾತೆಯು ಅವರ ಮನಸ್ಸನ್ನು ಎಂಥ ಉನ್ನತ ಸ್ಥಿತಿಯಲ್ಲಿ ಇರಿಸಿದ್ದಳೆಂದರೆ, ಅನಂತ ವಿಶ್ವಮನಸ್ಸಿನಲ್ಲಿ ಏಳುವ ಭಾವನೆಗಳೆಲ್ಲ ಅವರದೇ ಆಗುತ್ತಿದ್ದವು. ಹೀಗೆ ಶ್ರೀರಾಮಕೃಷ್ಣರ ಮನಸ್ಸು ವಿಶ್ವಮನಸ್ಸಾಗಿತ್ತು. ಅದರಲ್ಲಿ ಸಹಸ್ರಾರು ಭಾವಗಳ ಅಲೆಗಳು ಏಳುತ್ತಿದ್ದವು. ಅವೆಲ್ಲ ಭಾವಗಳೊಡನೆ ತಾದಾತ್ಮ್ಯ ಭಾವನೆಯನ್ನು ಪಡೆದುಕೊಳ್ಳುವ ವಿಶ್ವಮಾನವರಾಗಿದ್ದರು ಶ್ರೀರಾಮಕೃಷ್ಣರು.

## ಶ್ರೀರಾಮಕೃಷ್ಣ ಭಾವಧಾರೆ

ಶ್ರೀರಾಮಕೃಷ್ಣರು ಜಗನ್ಮಾತೆಯ ಸಗುಣ ಮತ್ತು ನಿರ್ಗುಣ – ಎರಡೂ ಸ್ವರೂಪಗಳನ್ನು ತಮ್ಮ ಸಾಧನೆಯ ಅವಧಿಯಲ್ಲಿ ಪೂರ್ಣವಾಗಿ ಅನುಭವಿಸಿದರು. ತದನಂತರ ನಿರ್ವಿಕಲ್ಪ ಸಮಾಧಿಯಲ್ಲಿ ಅವರು ಆರು ತಿಂಗಳು ಮಗ್ನರಾಗಿದ್ದರು. ಇದಾದ ಮೇಲೆ, ಜಗನ್ಮಾತೆಯು 'ಭಾವಮುಖದಲ್ಲಿರು' ಎಂದು ಅವರಿಗೆ ಆದೇಶವನ್ನು ನೀಡಿದ್ದಳು. 'ಯಾವುದರಿಂದ ಅನಂತ ವಿಶ್ವಭಾವಗಳು ಉಂಟಾಗುತ್ತಿವೆಯೋ, ಆ ವಿಶ್ವ-ಅಹಂ ನೀನಾಗಿರುವೆ. ಅದರ ಇಚ್ಛೆಯೇ ನಿನ್ನ ಇಚ್ಛೆ' ಎಂದು ನಿರ್ದೇಶನವನ್ನು ಕೊಟ್ಟಳು. ಈ ಭಾವಮುಖ ಸ್ಥಿತಿಯಲ್ಲಿಯೇ ಶ್ರೀರಾಮಕೃಷ್ಣರು ತಮ್ಮ ಉಳಿದ ಜೀವಿತವನ್ನು ಸವೆಸಿದರು; ಆ ಮೂಲಕ ಎಲ್ಲ ಧರ್ಮಗಳನ್ನೂ ಪಂಗಡಗಳನ್ನೂ ಮತಗಳನ್ನೂ ಸಿದ್ಧಾಂತಗಳನ್ನೂ ಪೂಜಾಪದ್ಧತಿ-ನಂಬಿಕೆಗಳನ್ನೂ ತಮ್ಮ

ತೆಕ್ಕೆಯಲ್ಲಿ ಒಳಸರಿಸಿಕೊಂಡರು; ಅವುಗಳೆಲ್ಲವನ್ನೂ ಹೃದಯಂಗಮವಾಗಿ ಸ್ವೀಕಾರ ಮಾಡಿದರು; ಅವುಗಳೆಲ್ಲದರಲ್ಲಿಯೂ ಒಂದಾಗಿ ಬಿಡುವ ಮಹಾನ್ ಸಾಮರ್ಥ್ಯವನ್ನು ಹೊಂದಿದ್ದರು. ಹೀಗೆ ಆಕಾಶದಷ್ಟು ಅನಂತವೂ, ಮಹಾಸಾಗರದಷ್ಟು ಗಭೀರವೂ ಆದುದು ಶ್ರೀರಾಮಕೃಷ್ಣರ ಭಾವ. ಅದನ್ನು ಅವರು ತಮ್ಮ ಶಿಷ್ಯರ ಮೂಲಕ ಇಡೀ ಲೋಕದ ಉದ್ಧಾರಕ್ಕಾಗಿ ಪ್ರವಾಹರೂಪದಲ್ಲಿ ಎಲ್ಲೆಡೆ ಪಸರಿಸಿದರು. ರಾಮಕೃಷ್ಣ ಮಠ ಮತ್ತು ಮಿಷನ್ನಿನ ಮೂಲಕ ಮತ್ತು ಸಹಸ್ರಾರು ಭಕ್ತ ಸಂಘಟನೆಗಳ ಮೂಲಕ ಈ ಭಾವವು ಧಾರೆಯಾಗಿ ಹರಿಯುತ್ತಲೇ ಇದೆ. ದಿನದಿನವೂ ನೂರಾರು ನವೀನ ಸಾಧು ಜನರನ್ನು ತನ್ನೊಳಗೆ ಮಿಳಿತಗೊಳಿಸಿಕೊಂಡು, ಅವರ ಜೀವನವನ್ನು ಪುನೀತಗೊಳಿಸುತ್ತಿದೆ. ಇದನ್ನೇ ನಾವು 'ರಾಮಕೃಷ್ಣ ಭಾವಧಾರೆ' ಎನ್ನುವುದು.

### ಅವತಾರ ಭಾವ

ಈ ಭಾವಧಾರೆಯ ಉಗಮವಾಗಿದ್ದು ಶ್ರೀರಾಮಕೃಷ್ಣರ ಹೃದಯಾಂತರಾಳದಲ್ಲಿಯೇ ಎನ್ನಬಹುದು. ತಮ್ಮೆಲ್ಲ ಸಾಧನೆಗಳಲ್ಲಿಯೂ ಸಿದ್ಧಿಯನ್ನು ಪಡೆದುಕೊಂಡ ಮೇಲೆ ಅವರಿಗೆ ತಮ್ಮ ಬಗ್ಗೆಯೇ ಕೆಲವು ನಂಬಿಕೆಗಳು ಉಂಟಾದವು. ಅವರು ಜಗನ್ಮಾತೆಯಲ್ಲಿ ಒಂದಾಗಿ, ಭಾವಮುಖ ಸ್ಥಿತಿಯನ್ನು ಪಡೆದುಕೊಂಡಾಗ, ಆ ಎಲ್ಲ ನಂಬಿಕೆಗಳು ಅವರಲ್ಲಿ ದೃಢವಾಗಿ ಪ್ರತಿಷ್ಠಿತವಾದುವು ಎಂದು ಸ್ವಾಮಿ ಶಾರದಾನಂದಜಿ ಅವರು ಅಭಿಪ್ರಾಯಪಡುತ್ತಾರೆ. ಅದರಲ್ಲಿ ಮೊದಲನೆಯದು ಅವತಾರ ಭಾವ. ತಮ್ಮ ಸಾಧಕ ಜೀವನವು ಇತರರಿಗಿಂತ ಭಿನ್ನವಾದುದು; ತಮ್ಮ ಸಾಧನೆಗಳೆಲ್ಲ ಇತರರ ಸಲುವಾಗಿ ಎನ್ನುವ ದೃಢ ವಿಶ್ವಾಸವು ಅವರಲ್ಲಿ ಮೈದೋರಿತ್ತು. ತಮ್ಮ ಸಾಧನೆಗಳು ಆಧ್ಯಾತ್ಮಿಕ ರಾಜ್ಯಕ್ಕೆ ಒಂದು ಹೊಸ ಬೆಳಕನ್ನು ನೀಡುತ್ತವೆ; ಇದು ತಮ್ಮ ಹಿತಕ್ಕಾಗಿ ಅಲ್ಲ, ಇಡೀ ಜಗತ್ತಿನ ಹಿತಕ್ಕಾಗಿ ಎಂದು ಅವರು ಕಂಡುಕೊಂಡರು.

ಎರಡನೆಯದು, ತಮಗೆ ಮುಕ್ತಿಯಿಲ್ಲ ಎನ್ನುವುದು. ಅವರು ಪರಮಾತ್ಮನೊಡನೆ ಅಭಿನ್ನ ಸ್ವರೂಪದವರು. ಹೀಗಾಗಿ ಭಗವತ್ ತತ್ತ್ವದ ಜೀವಿತೋದ್ದೇಶವನ್ನು ಕೈಗೊಳ್ಳಲು ತಾವು ಮತ್ತೆ ಮತ್ತೆ ಹುಟ್ಟಿ ಬರಬೇಕಾಗುತ್ತದೆ ಎಂದು ಶ್ರೀರಾಮಕೃಷ್ಣರು ಅರಿತುಕೊಂಡಿದ್ದರು. ಇದಲ್ಲದೆ, ತಮ್ಮ ದೇಹತ್ಯಾಗದ ಸಮಯದ ಪ್ರಜ್ಞೆಯೂ ಅವರಿಗೆ ಇತ್ತು.

### ಆಧ್ಯಾತ್ಮಿಕ ಭಾವನೆಗಳು

ಮೇಲಿನ ಮೂರು ನಂಬಿಕೆಗಳು ಶ್ರೀರಾಮಕೃಷ್ಣರು ತಮ್ಮ ಜೀವನದ ಬಗ್ಗೆ ಕಂಡುಕೊಂಡ ಸತ್ಯಗಳು. ಸ್ವಾಮಿ ಶಾರದಾನಂದಜಿ ಅವರು ಶ್ರೀರಾಮಕೃಷ್ಣರ ಆಧ್ಯಾತ್ಮಿಕ ದೃಢ ನಂಬಿಕೆಗಳನ್ನು ಪ್ರತ್ಯೇಕವಾಗಿ ವಿವರಿಸಿ ಹೇಳುತ್ತಾರೆ. ಅವುಗಳು ಶ್ರೀರಾಮಕೃಷ್ಣರ ಭಾವಧಾರೆಯ ಬಗೆಗಿನ ನಮ್ಮ ಈ ವಿಶ್ಲೇಷಣೆಯಲ್ಲಿ ಅತ್ಯಂತ ಗಮನಾರ್ಹ ಅಂಶಗಳಾಗುತ್ತವೆ ಎನ್ನಬಹುದು. ಅವುಗಳು ಹೀಗಿವೆ:

#### ೧. 'ಎಲ್ಲ ಧರ್ಮಗಳೂ ಸತ್ಯ– ಎಷ್ಟು ಮತವೋ ಅಷ್ಟು ಪಥಗಳು'

ಶ್ರೀರಾಮಕೃಷ್ಣ ಭಾವಧಾರೆಯ ಆಧಾರಸ್ತಂಭಗಳಲ್ಲಿ ಈ ಭಾವನೆಯೂ ಒಂದು. ಸ್ವಾಮಿ ಶಾರದಾನಂದಜಿ ಅವರ ಪ್ರಕಾರ, ಶ್ರೀರಾಮಕೃಷ್ಣರು ಈ ಸತ್ಯವನ್ನು ಸಾಮಾನ್ಯಬುದ್ಧಿಯಿಂದ ಮಾತ್ರವಲ್ಲ , ಯೋಗಬುದ್ಧಿಯಿಂದಲೂ ಚೆನ್ನಾಗಿ ಅರ್ಥಮಾಡಿಕೊಂಡಿದ್ದರು. ಅವರು ವಿವಿಧ ಧರ್ಮಗಳ ಸಾಧನೆಯನ್ನು ಮಾಡಿ, ಅವುಗಳೆಲ್ಲದರ ಗುರಿಯೂ ಒಂದೇ ಎಂದು ಅನುಭವಪೂರ್ವಕವಾಗಿ ತಿಳಿದುಕೊಂಡಿದ್ದರು. ಹೀಗೆ ತಮ್ಮ ಅನುಭಾವದ ಪ್ರಮಾಣದ ಆಧಾರದ ಮೇಲೆಯೇ ಶ್ರೀರಾಮಕೃಷ್ಣರು ಧರ್ಮಸಾಮರಸ್ಯವನ್ನು ಸಾಧಿಸಿದರು ಎನ್ನಬಹುದು. ಶ್ರೀರಾಮಕೃಷ್ಣರ ಈ ಆಧ್ಯಾತ್ಮಿಕ ಸಿದ್ಧಿಯು ಅವರ ಭಾವಧಾರೆಯನ್ನು ಉದಾರವನ್ನಾಗಿ ಮಾಡಿದೆ; ವಿಶಾಲವನ್ನಾಗಿ ಮಾಡಿದೆ; ವಿಶ್ವವ್ಯಾಪಕವನ್ನಾಗಿ ರೂಪಿಸಿದೆ. ಧರ್ಮಸಾಮ್ರಾಜ್ಯದಲ್ಲಿ ಈ ಬಗೆಯ ಸರ್ವವ್ಯಾಪಕತೆಯನ್ನು ನಾವು ಇನ್ನಾವ ಅವತಾರ ಪುರುಷರಲ್ಲಿಯೂ ಕಾಣುವುದಿಲ್ಲ. ಈ ಚೇತೋಹಾರಿ ಸಂಗತಿಯೇ ಶ್ರೀರಾಮಕೃಷ್ಣ ಭಾವಧಾರೆಯನ್ನು ಅತ್ಯಂತ ವಿಶಿಷ್ಟವೂ, ಸರ್ವಮಾನ್ಯವೂ ಆಗಿ ಮಾಡಿರುವುದು.

#### ೨. ದ್ವೈತ-ವಿಶಿಷ್ಟಾದ್ವೈತ-ಅದ್ವೈತಗಳೆಂಬ ಅವಸ್ಥಾ ಭೇದಗಳು

ಶ್ರೀರಾಮಕೃಷ್ಣರು ಸರ್ವಧರ್ಮಗಳ ಸಮನ್ವಯಾಚಾರ್ಯರು ಮಾತ್ರವಲ್ಲ , ಹಿಂದೂಧರ್ಮದ ಎಲ್ಲ ಮತಗಳ ಹಾಗೂ ಸಿದ್ಧಾಂತಗಳ ಸಮನ್ವಯಾಚಾರ್ಯರೂ ಆಗಿದ್ದರು. ಈ ಬಗೆಯ ಸಾಮರಸ್ಯವನ್ನು ಅವರು ತಮ್ಮ ಅನುಭೂತಿಯ ಅತ್ಯುನ್ನತ ಸ್ತರದಲ್ಲಿ ಸಾಧಿಸಿದರು. ಅದರಲ್ಲೂ ಮುಖ್ಯವಾಗಿ ಶತಶತಮಾನಗಳಿಂದ ಹಿಂದೂಧರ್ಮದಲ್ಲಿ ಪ್ರಚಲಿತವಾಗಿದ್ದ ದ್ವೈತ– ಅದ್ವೈತ – ವಿಶಿಷ್ಟಾದ್ವೈತ ಸಿದ್ಧಾಂತಗಳ ಅನುಯಾಯಿಗಳ ನಡುವಿನ ವೈಮನಸ್ಯವನ್ನು ಅವರು ಸುಲಭವಾಗಿ ಪರಿಹರಿಸಿಬಿಟ್ಟರು. ಶ್ರೀರಾಮಕೃಷ್ಣರ ಪ್ರಕಾರ, ಈ ಅನುಭವಗಳು ಪರಸ್ಪರ ವಿರೋಧಿಗಳಲ್ಲ ; ಪ್ರತಿಯೊಬ್ಬ ಸಾಧಕನಿಗೂ ಅವನ ಆಧ್ಯಾತ್ಮಿಕ ಉನ್ನತಿಯನ್ನು ಅನುಸರಿಸಿ, ಉಂಟಾಗುವ ಅನುಭೂತಿ ಸ್ತರಗಳು. ಅವು ಮನುಷ್ಯನೊಬ್ಬನ ಮನಸ್ಸಿನ ವಿವಿಧ ಆಧ್ಯಾತ್ಮಿಕ ಅವಸ್ಥೆಗಳು. ಹೀಗೆ ಶ್ರೀರಾಮಕೃಷ್ಣರು ನೈಜಾರ್ಥದಲ್ಲಿ ಮತ ಸಾಮರಸ್ಯವನ್ನು ಸಾಧಿಸಿದರು. ಇದು ಜಗತ್ತಿನ ಇತಿಹಾಸದಲ್ಲಿಯೇ ಅಪೂರ್ವವಾದ ಸಂಗತಿ ಎನ್ನಬಹುದು.

#### ೩. ಕರ್ಮಯೋಗದಿಂದ ಸಾಧಾರಣ ಮಾನವರ ಪ್ರಗತಿ

ಕರ್ಮಯೋಗದ ವಿಚಾರದಲ್ಲಿಯೂ ಸಾಮರಸ್ಯವನ್ನು ಸಾಧಿಸಿದ ಹೆಗ್ಗಳಿಕೆ ಶ್ರೀರಾಮಕೃಷ್ಣರದ್ದು. ಮನುಷ್ಯನು ತಮಸ್ಸು ಹಾಗೂ ರಜಸ್ಸಿನ ಹಂತಗಳಿಗೆ ಸೀಮಿತನಾಗಿದ್ದಾಗ ಕರ್ಮ ಮಾಡುವುದು ಅನಿವಾರ್ಯ. ಅದೇ ವ್ಯಕ್ತಿಯು ಸಾತ್ವಿಕ ನೆಲೆಗೆ ಏರಿದಾಗ, ಕರ್ಮವು ಸ್ವಾಭಾವಿಕವಾಗಿಯೇ ಕಳಚಿ ಬೀಳುವುದು. ಅಲ್ಲಿಯವರೆಗೆ ನಾವು ಭಗವಂತನನ್ನು ಆಶ್ರಯಿಸಿಕೊಂಡು, ನಮ್ಮ ಕುಟುಂಬದ ಕೆಲಸಗಳನ್ನೆಲ್ಲ ಮಾಡಬೇಕು. ಇದರ ಜೊತೆಜೊತೆಗೆ ಸಾಧ್ಯವಾದಷ್ಟು ಭಗವಂತನ ನಾಮವನ್ನು ಜಪಿಸಬೇಕು; ಧ್ಯಾನ ಮಾಡಬೇಕು. ಇದೇ ಕರ್ಮಯೋಗದ ಮಾರ್ಗ ಎಂದು ಶ್ರೀರಾಮಕೃಷ್ಣರು ಉಪದೇಶಿಸುತ್ತಾರೆ. ಹೀಗೆ ಕರ್ಮಯೋಗ ಮತ್ತು ಕರ್ಮಸಂನ್ಯಾಸಗಳ ನಡುವಣ ವೈಪರೀತ್ಯವನ್ನು ಸರಳ ಸುಂದರ ರೀತಿಯಲ್ಲಿ ಶ್ರೀರಾಮಕೃಷ್ಣರು ಬಗೆಹರಿಸುತ್ತಾರೆ.

### ೪. ಉದಾರ ಸಂಪ್ರದಾಯದ ಪ್ರವರ್ತನೆ

ಶ್ರೀರಾಮಕೃಷ್ಣರ ಸಾಧನೆಗಳೆಲ್ಲದರ ಫಲರೂಪವಾಗಿ ಜಗತ್ತಿಗೆ ಒದಗಿ ಬಂದ ಅನರ್ಘ್ಯ ರತ್ನಗಳಲ್ಲಿ ಅಪೂರ್ವವಾದುದೆಂದರೆ, ಉದಾರ ಮನೋಭಾವವನ್ನು ಅವಲಂಬಿಸಿದ ಒಂದು ನೂತನ ಸಂಪ್ರದಾಯವನ್ನು ಅವರು ತಮ್ಮ ಜೀವನದಲ್ಲಿ ಹುಟ್ಟುಹಾಕಿದ್ದು. ಇದನ್ನು ಅವರು ಜಗನ್ಮಾತೆಯ ಪ್ರೇರಣೆಯಿಂದಲೇ ನೆರವೇರಿಸಿದರು. ಈ ನವೀನ ಸಂಪ್ರದಾಯವೇ ಅವರ ದೇಹತ್ಯಾಗದ ನಂತರ ರಾಮಕೃಷ್ಣ ಮಹಾಸಂಘದ ರೂಪವನ್ನು ತಾಳಿತು. ಈ ಮಹಾನ್ ಸಂಸ್ಥೆಯು ಜಗನ್ಮಾತೆಯ ಇಚ್ಛೆಯಿಂದ ಶ್ರೀರಾಮಕೃಷ್ಣರ ಹೃದಯಾಂತರಾಳದಲ್ಲಿ ಮೂಡಿಬಂದ ಸಂಕಲ್ಪದ ಮೂರ್ತರೂಪವೇ ಆಗಿದೆ ಎನ್ನುವುದು ನಿರ್ವಿವಾದ. ಈ ಮಹಾನ್ ಆಂದೋಲನವು ಶ್ರೀರಾಮಕೃಷ್ಣ ಭಾವಧಾರೆಯ ಸಾಂಘಿಕ ಸ್ವರೂಪ. ಹೀಗೆಂದೇ ಸ್ವಾಮಿ ವಿವೇಕಾನಂದರು ರಾಮಕೃಷ್ಣ ಮಹಾಸಂಘವು ರಾಮಕೃಷ್ಣರ ಭೌತಿಕ ಶರೀರವೇ ಆಗಿದೆ ಎಂದು ಅಭಿಪ್ರಾಯ ಪಡುತ್ತಾರೆ.

### ೫. 'ಯಾರದು ಕೊನೆಯ ಜನ್ಮವೊ ಅವರು ತಮ್ಮೆಡೆಗೆ ಬರುತ್ತಾರೆ'

ಶ್ರೀರಾಮಕೃಷ್ಣರ ಕಡೆಯ ಆಧ್ಯಾತ್ಮಿಕ ವಿಶ್ವಾಸವೆಂದರೆ, ಅವರು ಯೋಗದೃಷ್ಟಿಯಿಂದ ಕಂಡುಕೊಂಡ ಭವಿಷ್ಯದ ಒಂದು ದೃಷ್ಟಿ. ಇದರಂತೆ, ಅವರು 'ಯಾರದು ಕಡೆಯ ಜನ್ಮವೋ ಅವರು ತಮ್ಮೆಡೆಗೆ ಬರುತ್ತಾರೆ' ಎಂದು ಸ್ಪಷ್ಟವಾಗಿ ತಿಳಿದುಕೊಂಡಿದ್ದರು.

ಹೀಗೆ ರಾಮಕೃಷ್ಣ ಭಾವಧಾರೆ ಮತ್ತು ರಾಮಕೃಷ್ಣ ಆಂದೋಲನದ ಆಕರವನ್ನು ನಾವು ಕಾಣವುದು ಶ್ರೀರಾಮಕೃಷ್ಣರಲ್ಲಿಯೇ. ಅವತಾರಪುರುಷರಾದ ಶ್ರೀರಾಮಕೃಷ್ಣರ ಪ್ರಚಂಡ ಇಚ್ಛಾಶಕ್ತಿಯೇ ಇದನ್ನು ಆಗುಮಾಡಿಸಿತು. ಈ ಪುಣ್ಯಸಂಕಲ್ಪವೇ ಇಂದಿಗೂ ರಾಮಕೃಷ್ಣ ಮಹಾಸಂಘದ ರಕ್ಷಾಕವಚವಾಗಿದೆ; ಎಲ್ಲ ರೀತಿಯಿಂದಲೂ ಈ ಪುಣ್ಯಸಂಸ್ಥೆಯ ಅಸ್ತಿಭಾರವಾಗಿದೆ. ಇನ್ನೊಂದು ಆಸಕ್ತಿಕರವಾದ ವಿಷಯವೆಂದರೆ, ಶ್ರೀರಾಮಕೃಷ್ಣರು ತಮ್ಮ ಭಾವಧಾರೆಯು ಶತಶತಮಾನಗಳ ಕಾಲ ಅವ್ಯಾಹತವಾಗಿ ಹರಿದುಕೊಂಡು ಹೋಗಲು ರಾಮಕೃಷ್ಣ ಮಹಾಸಂಘವನ್ನು ಈ ಶಕ್ತಿಪ್ರವಾಹದ ಸ್ರೋತವನ್ನಾಗಿ ಬಳಸಿಕೊಳ್ಳುತ್ತಿದ್ದಾರೆ ಎನ್ನವುದು. ಹೀಗೆ ರಾಮಕೃಷ್ಣ ಮಹಾಸಂಘವು ರಾಮಕೃಷ್ಣ ಭಾವಧಾರೆಯ ವಾಹಕವಾಗಿದೆ; ಅದರ ಸಂರಕ್ಷಕವಾಗಿದೆ; ವಿಶ್ವದೆಲ್ಲೆಡೆ ಈ ಭಾವಧಾರೆಯನ್ನು ಸಮಸ್ತ ಮಾನವ ಜನಾಂಗಕ್ಕೆ ಹರಡುವ ಯಂತ್ರವಾಗಿದೆ.

### 'ಶಿವಜ್ಞಾನೇ ಜೀವಸೇವಾ'

೧೮೮೪ರ ಒಂದು ದಿನ ಶ್ರೀರಾಮಕೃಷ್ಣರು ತಮ್ಮ ಕೊಠಡಿಯಲ್ಲಿ ಕುಳಿತು ಶಿಷ್ಯರೊಡನೆ ಮಾತುಕತೆಯಾಡುತ್ತಿದ್ದರು. ಅವರ ನಡುವೆ ನರೇಂದ್ರನೂ ಇದ್ದನು. ಗುರುದೇವರು ಚೈತನ್ಯ ಮಹಾಪ್ರಭುವಿನ ಮತ ಸಿದ್ಧಾಂತವನ್ನು ಕುರಿತು ಮಾತನಾಡುತ್ತಿದ್ದರು. ಅವರು ಹೇಳುತ್ತಿದ್ದರು: ''ಈ ಮತವು ತಮ್ಮ ಅನುಯಾಯಿಗಳಿಗೆ ಮೂರು ಸಾಧನೆಗಳನ್ನು ಉಪದೇಶಿಸುತ್ತದೆ: ಭಗವನ್ನಾಮದಲ್ಲಿ ರುಚಿ, ಜೀವಿಗಳಲ್ಲಿ ದಯೆ ಮತ್ತು ವೈಷ್ಣವರ (ಭಗವದ್ಭಕ್ತರ) ಸೇವೆ.'' ಜೀವಿಗಳಲ್ಲಿ ದಯೆ ಎಂಬ ಪದಗಳನ್ನು ಉಚ್ಚರಿಸುವಾಗ ಶ್ರೀರಾಮಕೃಷ್ಣರು ಸಮಾಧಿಸ್ಥರಾದರು. ಅನಂತರ ಅರ್ಧಬಾಹ್ಯ ಸ್ಥಿತಿಗೆ ಬಂದು ಈ ಮಾತುಗಳನ್ನು ಹೇಳಿದರು: ''ಜೀವಿಗಳ ಮೇಲೆ ದಯೆ! ಜೀವಿಗಳ ಮೇಲೆ ದಯೆ! ನೀನೊಬ್ಬ ಮೂರ್ಖ! ನೀನೊಬ್ಬ ನೆಲದ ಮೇಲೆ ತೆವಳುತ್ತಿರುವ ಹುಳು, ಅಂಥ ನೀನು ಇತರರ ಮೇಲೆ ದಯೆಯನ್ನು ತೋರಿಸುತ್ತೀಯೇನು?! ದಯೆಯನ್ನು ತೋರಿಸಲು ನೀನ್ಯಾರು? ಇದು ಸಾಧ್ಯವಿಲ್ಲ. ಇತರರ ಮೇಲೆ ದಯೆಯಲ್ಲ, ***ಶಿವಜ್ಞಾನೇ ಜೀವಸೇವಾ*** – ಮಾನವನನ್ನು ಭಗವಂತನೆಂದೇ ಪರಿಗಣಿಸಿ, ಆತನ ಸೇವೆ ಮಾಡುವುದು.''

ಅಲ್ಲಿ ನೆರೆದವರೆಲ್ಲರೂ ಗುರುದೇವರ ಮಾತುಗಳಿಂದ ಪ್ರಭಾವಿತರಾದರು. ಆದರೆ ಈ ಮಾತುಗಳ ವಿಶ್ವವ್ಯಾಪಕ ಮಹತ್ವವನ್ನು ಅರ್ಥಮಾಡಿಕೊಂಡವನು ನರೇಂದ್ರನೊಬ್ಬನೇ. ಶ್ರೀರಾಮಕೃಷ್ಣರ ಕೊಠಡಿಯಿಂದ ಹೊರಬಂದು ಆತನು ಇತರರಿಗೆ ಹೀಗೆ ಹೇಳುತ್ತಾನೆ: '' ನಾನಿಂದು ಗುರುದೇವರ ಮಾತುಗಳಲ್ಲಿ ಹೊಸ ಬೆಳಕನ್ನು ಕಂಡುಕೊಂಡೆನು. ಎಷ್ಟು ಸುಂದರವಾಗಿ ಅವರು ಭಕ್ತಿಯ ಆದರ್ಶವನ್ನು ವೇದಾಂತದ ಜ್ಞಾನದ ಜೊತೆಗೆ ಸಮರಸಗೊಳಿಸಿದರು!... ತಮ್ಮ ಭಾವನೆಲೆಯಲ್ಲಿ ಗುರುದೇವರು ನುಡಿದ ಈ ಪರಿಪಕ್ವ ಅರಿವಿನ ಮಾತುಗಳಿಂದ ನಾನು ತಿಳಿದುಕೊಂಡೆನು: ಸಮಾಜದ ನೆಲೆಯ ಹೊರಗೆ ತಾಪಸಿಯೊಬ್ಬ ಬಾಳುವ ವೇದಾಂತ ಆದರ್ಶವನ್ನು ಕುಟುಂಬದಲ್ಲಿಯೂ ಆಚರಣೆಗೆ ತರಬಹುದು. ಹಾಗೆಯೇ ದಿನನಿತ್ಯದ ಬಾಳುವೆಯ ಎಲ್ಲ ಸ್ತರಗಳಲ್ಲಿಯೂ ಇದನ್ನು ಅಳವಡಿಸಿಕೊಳ್ಳಬಹುದು. ಪರಮಾತ್ಮನೇ ಈ ಜಗತ್ತಾಗಿಯೂ, ಹಾಗೂ ಸೃಷ್ಟಿಗೊಂಡ ಜೀವಿಗಳಾಗಿಯೂ ಪ್ರಕಟಗೊಂಡಿದ್ದಾನೆ ಎಂದು ಒಬ್ಬ ವ್ಯಕ್ತಿಯು ಯಾವುದೇ ಉದ್ಯೋಗದಲ್ಲಿದ್ದರೂ ತಿಳಿದುಕೊಳ್ಳಬೇಕು ಮತ್ತು ಅನುಭವಕ್ಕೆ ತಂದುಕೊಳ್ಳಬೇಕು.. ಮನುಷ್ಯನ ಸೇವೆ ಮಾಡುವುದು, ಅವನನ್ನು ಭಗವಂತನ ಅಭಿವ್ಯಕ್ತಿಯೆಂದೇ ತಿಳಿದುಕೊಳ್ಳುವುದು ಇವು ಚಿತ್ತಶುದ್ಧಿಯನ್ನು ಉಂಟುಮಾಡುತ್ತವೆ. ಹಾಗೂ ಅಲ್ಪ ಕಾಲದಲ್ಲಿಯೇ ಸಾಧಕನು ಸಚ್ಚಿದಾನಂದ ಸ್ವರೂಪನಾದ ಪರಮಾತ್ಮನ ಅಂಗವೇ ನಾನು ಎಂದು ಸಾಕ್ಷಾತ್ಕರಿಸಿಕೊಳ್ಳುತ್ತಾನೆ.''

**'ಶಿವಜ್ಞಾನೇ ಜೀವಸೇವಾ'** ಎಂಬ ಶ್ರೀರಾಮಕೃಷ್ಣರ ಉದ್ಘೋಷವು ರಾಮಕೃಷ್ಣ ಮಹಾಸಂಘದ ಧ್ಯೇಯಮಂತ್ರವಾಗಿ ಪರಿಣಮಿಸಿತು. ಇದು ಈ ಮಹಾನ್ ಸಂಸ್ಥೆಯು ಕೈಗೊಳ್ಳುವ ಎಲ್ಲ ಸೇವಾ ಕಾರ್ಯಗಳಿಗೂ ಮಾರ್ಗದರ್ಶಿ ಸೂತ್ರವಾಗಿದೆ. ಇದರ ತಾತ್ತ್ವಿಕ ಮಹತ್ವವನ್ನು ಮತ್ತು ಅನುಷ್ಠಾನ ಸಾಧ್ಯತೆಯನ್ನು ಸ್ವಾಮಿ ವಿವೇಕಾನಂದರೇ ಹೃದಯಸ್ಪರ್ಶಿಯಾಗಿ ವರ್ಣಿಸಿರುವುದನ್ನು ನಾವು ಮೇಲಿನ ವಾಕ್ಯಗಳಲ್ಲಿ ಕಂಡುಕೊಂಡಿದ್ದೇವೆ. ಭಾರತೀಯ ಆಧ್ಯಾತ್ಮಿಕ ಸಾಧನೆಯ ಅತ್ಯಂತ ಪ್ರಾಯೋಗಿಕ ವ್ಯಾಖ್ಯೆಯನ್ನು ನಾವಿಲ್ಲಿ ನೋಡುತ್ತೇವೆ. ಇದು ರಾಮಕೃಷ್ಣ ಭಾವಧಾರೆಯ ಗಂಗಾಪ್ರವಾಹದ ಗರ್ಭದಲ್ಲಿ ದೊರಕುವ ಅನರ್ಘ್ಯರತ್ನಗಳಲ್ಲಿ ಒಂದಾಗಿದೆ.

### ಸೇವಾಯೋಗ

ಗುರುದೇವರ ಮೇಲಿನ ಆದೇಶವನ್ನು ಅನುಸರಿಸಿಯೇ, ರಾಮಕೃಷ್ಣ ಆಂದೋಲನದ ಅನುಯಾಯಿಗಳು ತಮ್ಮ ಜೀವನದಲ್ಲಿ ಸೇವಾಯೋಗವನ್ನು ಅಳವಡಿಸಿಕೊಳ್ಳುತ್ತಾರೆ. ಇವರಿಗೆ ಸೇವೆಯು

ಜೀವನದ ಬರಿಯ ಒಂದು ಅಂಗವಾಗುವುದಿಲ್ಲ; ಇದಕ್ಕೆ ಬದಲಾಗಿ ಇಡೀ ಜೀವನವೇ ಸೇವಾಮಾರ್ಗವಾಗುತ್ತದೆ. ಸ್ವಾಮಿ ವಿವೇಕಾನಂದರು ಈ ಮಾರ್ಗದಲ್ಲಿ ಭಗವದಾರಾಧನೆಯ ವಿನೂತನ ಬಗೆಯೊಂದನ್ನು ಮಾನವ ಜನಾಂಗಕ್ಕೆ ಪ್ರಸ್ತುತಪಡಿಸುತ್ತಾರೆ. ಅದೆಂದರೆ, 'ಮಾನವನಲ್ಲಿ ಭಗವಂತನ ಪೂಜೆ.' ಈ ಮಾರ್ಗದಲ್ಲಿ ಅವರು ಹೇಳುವಂತೆ, ಸೇವೆ ಮತ್ತು ತ್ಯಾಗಗಳೇ ಜೀವನಧ್ಯೇಯಗಳಾಗಿರುತ್ತವೆ. ಈ ಸಾಧನಾ ಪಥದಲ್ಲಿ ಸ್ವಂತ ಮುಕ್ತಿಯ ಜೊತೆಜೊತೆಗೆ ಜಗತ್ತಿನ ಹಿತವೂ ಸಾಧಿತವಾಗುತ್ತದೆ. ಅಂತರ್ಯಾಮಿ ಪರಮಾತ್ಮನ ಆರಾಧನೆಯ ಜೊತೆಜೊತೆಗೆ ಜಗದ್ರೂಪಿ ವಿರಾಟ್ ಪುರುಷನ ಆರಾಧನೆಯೂ ನಡೆಯುತ್ತದೆ. ಸಾಧಕನು ತನ್ನ ಅಂತರಂಗದಲ್ಲಿರುವ ಭಗವತ್‌ತತ್ತ್ವದ ಅನುಭೂತಿಯನ್ನು ಪಡೆಯುವುದರೊಂದಿಗೆ, ವಿಶ್ವತೋಮುಖನಾದ ಅಣೋರಣೀಯನಾದ ಸರ್ವವ್ಯಾಪಿ ಪರಮಾತ್ಮನ ಅನುಭಾವವನ್ನೂ ಪಡೆದುಕೊಳ್ಳುತ್ತಾನೆ. ಹೀಗೆ ಪರಿಪೂರ್ಣವಾದ ಭಗವದ್ದರ್ಶನವು ಆ ಮಹಾತ್ಮನಿಗೆ ಉಂಟಾಗುತ್ತದೆ. ಮಾನವ ಜೀವನದಲ್ಲಿ ಸಾಧ್ಯವಾಗಬಹುದಾದ ಈ ಅತ್ಯುನ್ನತ ಆದರ್ಶವು ಸ್ವಾಮಿ ವಿವೇಕಾನಂದರು ನೀಡಿದ, **'ಆತ್ಮನೋ ಮೋಕ್ಷಾರ್ಥಂ, ಜಗದ್ಧಿತಾಯ ಚ'** (ತನ್ನ ಮೋಕ್ಷಕ್ಕಾಗಿ ಮತ್ತು ಜಗತ್ತಿನ ಹಿತಕ್ಕಾಗಿ ಕೂಡ) ಎಂಬ ಧ್ಯೇಯವಾಕ್ಯದಲ್ಲಿ ಘನೀಭವಿಸಿದೆ. ರಾಮಕೃಷ್ಣ ಭಾವಧಾರೆಯು ಜಗತ್ತಿಗೆ ನೀಡಿದ ಅಪೂರ್ವ ಕೊಡುಗೆಗಳಲ್ಲಿ ಇದೂ ಒಂದು.

### 'ಸರ್ವಜನಾಂಗದ ಶಾಂತಿಯ ತೋಟ'

ಕನ್ನಡ ಜನರ ತವರೂರಾದ ಕರ್ನಾಟಕ ಪ್ರದೇಶವು ಐತಿಹಾಸಿಕವಾಗಿ, ಎಲ್ಲ ಮತಪಂಥಗಳೂ ಸಾಮರಸ್ಯದಿಂದ ಬಾಳಿ ಬದುಕಿದ ಸಮನ್ವಯ ಕ್ಷೇತ್ರ. ಬೌದ್ಧ-ಜೈನ-ಶೈವ-ವೈಷ್ಣವ-ಲಿಂಗಾಯತ ಮುಂತಾದ ಹಲವು ಧಾರ್ಮಿಕ ಪಂಥಗಳು ಕರ್ನಾಟಕದ ಸಂಸ್ಕೃತಿಯನ್ನು ಪುಷ್ಟಿಗೊಳಿಸಿವೆ, ಸಮೃದ್ಧವನ್ನಾಗಿ ಮಾಡಿವೆ. ಹೀಗಾಗಿ ನೂರಾರು ವರ್ಷಗಳಿಂದ ಸಮನ್ವಯದ ಬೀಡಾದ ಈ ಕನ್ನಡ ಭೂಮಿಯು, ಶ್ರೀರಾಮಕೃಷ್ಣರ ಸಮನ್ವಯ ಸಂದೇಶವನ್ನು ಹಾರ್ದಿಕವಾಗಿ ಸ್ವೀಕರಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ೨೦ನೆಯ ಶತಮಾನದ ಆರಂಭ ಕಾಲದಲ್ಲಿ ಕರ್ನಾಟಕವನ್ನು ಪ್ರವೇಶಿಸಿದ ರಾಮಕೃಷ್ಣ ಭಾವಧಾರೆಯು ಕನ್ನಡ ಸಾಹಿತ್ಯದ ಬೆಳವಣಿಗೆಗೆ ನೀಡಿದ ಕೊಡುಗೆ ಅಪಾರವಾದುದು. ರಾಮಕೃಷ್ಣ-ವಿವೇಕಾನಂದ-ವೇದಾಂತ ಸಾಹಿತ್ಯವು ಕನ್ನಡ ಜನರ ಮಾನಸವನ್ನು ಆಧ್ಯಾತ್ಮಿಕವಾಗಿ, ಸಾಂಸ್ಕೃತಿಕವಾಗಿ ಚೈತನ್ಯಮಯಗೊಳಿಸಿತು. ರಾಮಕೃಷ್ಣ ಮಹಾಸಂಘದ ಹಲವು ಕೇಂದ್ರಗಳು ಕನ್ನಡ ನೆಲದಲ್ಲಿ ಬೇರುಬಿಟ್ಟು, ಇಲ್ಲಿನ ಜನರಿಗೆ ರಾಮಕೃಷ್ಣ ಭಾವಧಾರೆಯ ಪುಣ್ಯಸಿಂಚನವನ್ನು ಮಾಡಿಸುತ್ತಿವೆ. ಕನ್ನಡ ಸಾಹಿತ್ಯದ ದಿಗ್ಗಜರು ತಮ್ಮ ಅಕ್ಷರಸೇವೆಯ ಮೂಲಕ ಶ್ರೀರಾಮಕೃಷ್ಣರ ಆರಾಧನೆಯನ್ನು ಮಾಡಿದ್ದಾರೆ. ರಾಮಕೃಷ್ಣ ಮಹಾಸಂಘದ ಆಶ್ರಮಗಳು ಮತ್ತು ಇತರ ಹಲವಾರು ಕೇಂದ್ರಗಳು ಅನೇಕ ರೀತಿಯ ಶೈಕ್ಷಣಿಕ, ವೈದ್ಯಕೀಯ ಮತ್ತಿತರ ಸೇವಾಕಾರ್ಯಗಳ ಮೂಲಕ ಜೀವರೂಪಿ ಭಗವಂತನ ಸೇವೆಯನ್ನು ಮಾಡುತ್ತಿವೆ. ಹೀಗೆ ಯುಗಪುರುಷ ಶ್ರೀರಾಮಕೃಷ್ಣರ ವಿಶ್ವಮಾನಸದ ಸತ್ಸಂಕಲ್ಪರೂಪಿಯಾದ ರಾಮಕೃಷ್ಣ ಭಾವಧಾರೆಯ ಅನುಷ್ಠಾನವು ಕನ್ನಡ ನೆಲದಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ನಡೆದಿದೆ, ನಡೆಯುತ್ತಿದೆ, ಮತ್ತು ಇನ್ನು ಮುಂದೆಯೂ ಅವ್ಯಾಹತವಾಗಿ ನಡೆಯಲಿದೆ. ✽

## ಶ್ರೀಮಾತೆಯವರ ಉಪದೇಶಗಳು



✽ ಒಂದು ದಿನ ಶ್ರೀಮಾತೆ ಒಂಬತ್ತು-ಹತ್ತು ಗಂಟೆಯ ಹೊತ್ತಿಗೆ ಒಂದೆಡೆ ಕುಳಿತು ಎಣ್ಣೆ ಹಚ್ಚಿಕೊಳ್ಳುತ್ತಿದ್ದರು. ಆಗ ಅಲ್ಲಿ ನೆಲ ಗುಡಿಸುತ್ತಿದ್ದವನು, ಕಸಬರಿಕೆಯನ್ನು ಅಲ್ಲೇ ಒಂದೆಡೆ ಬಿಸಾಡಿ ಹೋದ. ಅದನ್ನು ನೋಡಿದ ಶ್ರೀಮಾತೆ, ''ಅದೇನಪ್ಪಾ, ಕೆಲಸವಾಯಿತು ಅಂತ ಅದನ್ನು ಹಾಗೇ ಅಸಡ್ಡೆಯಿಂದ ಬಿಸಾಡಿಬಿಟ್ಟೆ ? ಬಿಸಾಡುವುದಕ್ಕೆ ಎಷ್ಟು ಸಮಯ ಬೇಕಾಗುವುದೋ, ನಿಧಾನವಾಗಿ ಇಡುವುದಕ್ಕೂ ಅಷ್ಟೇ ಸಮಯ ಸಾಕು. ಕ್ಷುಲ್ಲಕ ವಸ್ತು ಅಂತ ಅದನ್ನು ತುಚ್ಛವಾಗಿ ನೋಡಬೇಕೆ ? ನೀನು ಯಾವುದನ್ನು ರಕ್ಷಿಸುತ್ತೀಯೋ, ಅದು ನಿನ್ನನ್ನು ರಕ್ಷಿಸುವುದು. ಕಸಬರಿಕೆಯಂತೂ ನಿನಗೆ ಮತ್ತೆ ಬೇಕಾಗುವುದಲ್ಲವೆ? ಅದನ್ನು ಬಿಟ್ಟುಬಿಡಲಾಗದು, ಈ ಸಂಸಾರದಲ್ಲಿ ಅದೂ ಒಂದು ಅಂಗ. ಆ ದೃಷ್ಟಿಯಿಂದಲೂ ಅದಕ್ಕೆ ಒಂದು ಮರ್ಯಾದೆಯಿದೆ. ಯಾವುದಕ್ಕೆ ಏನೇನು ಮಾನ, ಗೌರವ ಸಲ್ಲಬೇಕೋ ಅದನ್ನು ಸಲ್ಲಿಸಬೇಕು. ಕಸಬರಿಕೆಯನ್ನೂ ಕೂಡ ಗೌರವದಿಂದ ಒಂದೆಡೆ ಇಡಬೇಕು. ಸಾಮಾನ್ಯ ಕೆಲಸವನ್ನೂ ಶ್ರದ್ಧೆಯಿಂದ ಮಾಡಬೇಕು'' ಎಂದರು.

✽ ಒಂದು ದಿನ ರಾಧುವಿಗೆ ಅತ್ಯಂತ ಪ್ರೀತಿಪಾತ್ರವಾದ ಬೆಕ್ಕು ಅಂಗಳದ ತುದಿಯಲ್ಲಿ ಮಲಗಿತ್ತು. ಒಬ್ಬಾಕೆ ಹೆಂಗಸು ಅದರ ಬಳಿ ನಿಂತು ಕಾಲಿನಿಂದ ಅದರೊಂದಿಗೆ ಆಟವಾಡುತ್ತಿದ್ದಳು. ಕ್ರಮೇಣ ಅವಳು ಅದರ ತಲೆಯ ಮೇಲೂ ಕಾಲನ್ನಿಟ್ಟಳು. ಅದನ್ನು ನೋಡಿದ ಶ್ರೀಮಾತೆ, ''ಏನಮ್ಮಾ, ಅದೇನು ಮಾಡುತ್ತಿದ್ದೀಯಾ ? ತಲೆ ಗುರುವಿನ ಸ್ಥಾನ. ತಲೆಯ ಮೇಲೆ ಕಾಲನ್ನಿಡಬಹುದೆ ? ಅದಕ್ಕೆ ನಮಸ್ಕಾರ ಮಾಡು'' ಎಂದರು. ಆ ಮಹಿಳೆ ಆಗ, ''ಅಮ್ಮಾ, ನನಗೆಂದೂ ಅದು ಗೊತ್ತಿರಲಿಲ್ಲ. ಇವತ್ತೇ ನಾನು ಅದನ್ನು ತಿಳಿದುಕೊಂಡೆ'' ಎಂದಳು.

*('ಶ್ರೀಶಾರದಾದೇವಿ ವಚನವೇದ', ಪು. ೫೫೨)*